# ನಾಂದಿಪದ

ಕಾಳಿದಾಸನ ನಾಟಕ 'ಶಾಕುಂತಲ'ದಲ್ಲಿ ದುಷ್ಯಂತ ಮಹಾರಾಜ ತನ್ನ ನೆನಪಿಗಾಗಿ ನಾಯಕಿ ಶಾಕುಂತಲೆಗೆ ಒಂದು ಉಂಗುರ ಕೊಡುತ್ತಾನೆ. ಆ ನೆನಪಿನ ಉಂಗುರವನ್ನು ಕಳೆದುಕೊಂಡ ಚೆಲುವೆ ಶಾಕುಂತಲೆ ಪಡುವ ಪಾಡು ಇಡೀ ನಾಟಕವನ್ನು ಆವರಿಸುತ್ತ, ಮನುಷ್ಯ ಕಳೆದುಕೊಂಡದ್ದಕ್ಕೆ ಒಂದು ರೂಪಕವಾಗಿ ನಿಲ್ಲುತ್ತದೆ. ಇಲ್ಲಿ ಇಬ್ಬರೂ ಒಬ್ಬರನ್ನೊಬ್ಬರನ್ನು ಕಳೆದುಕೊಂಡಿದ್ದಾರೆ. ನೆನಪನ್ನೇ ಅವಲಂಬಿಸಿ ಜೀವಿಸುವ ಮನುಷ್ಯ ಅದನ್ನೇ ಕಳೆದುಕೊಂಡಾಗ ಅನುಭವಿಸುವ ಯಾತನೆಗೆ ಕೊನೆಯಿಲ್ಲ. ಇದೇ ನೆನಪನ್ನು ಆಧರಿಸಿ ಅನೇಕ ಸಿನಿಮಾಗಳು, ಕಾದಂಬರಿಗಳು ಬಂದಿವೆ. ನಮ್ಮ ವ್ಯಾಪಾರಿ ಸಿನಿಮಾಗಳಲ್ಲಿ ತಾಯಿಯಿಂದ ಬೇರ್ಪಟ್ಟ ಮಕ್ಕಳು ಅವರನ್ನು ಕೂಡಿಸುವ ಕೊಂಡಿಯಾಗಿ ಒಂದು ಲಾಕೆಟ್, ಕಾಡುವ ಹಾಡು ಕೊನೆಯ ವರೆಗೂ ಇರುತ್ತದೆ. ಈ ಬಗೆಯ 'ಕಥಾಸಮಯ'ಗಳು ನಮ್ಮ ಜನಪ್ರಿಯ ಕತೆಗಳ ಪ್ರಮುಖ ಅಂಶ ಸಹ.

ಮನುಷ್ಯನ ನೆನಪು, ವೇದನೆಯ ಮೊತ್ತ ಅವನು ಸೃಷ್ಟಿಸುವ ಕಲೆಗಳು. ಅದು ಸಾಹಿತ್ಯ ಸೇರಿದಂತೆ ಯಾವುದೇ ಕಲೆ ಇರಬಹುದು. ಬರವಣಿಗೆಯಂತೂ ಮನುಷ್ಯನ ನೆನಪು, ಅನುಭವವನ್ನು ದಾಖಲಿಸಲು ಕಂಡುಕೊಂಡದ್ದು. ಕೇವಲ ನೆನಪನ್ನೇ ದಾಖಲಿಸಿದರೆ ಅದು ಕಲೆಯಾಗಲಾರದು. ಬರಹದಲ್ಲಿ ನೆನಪೂ ಇರುತ್ತದೆ, ಆಕ್ಷಣದ ಸಂವೇದನೆಯೂ ಇರುತ್ತದೆ.



ಪ್ರದೀಪಕುಮಾರ್ ಡಿ.ಎಂ.

ನಾವು ಜೀವಿಸುತ್ತಿರುವುದೂ ಹಿಂದಿನ ದಿನಗಳ ಅನುಭವದಿಂದ. ಅಲ್ಲಿ ನಾವು ನೋಡಿದ ಮಾಡಿದ ಕೆಲಸಗಳ ನೆನಪೂ ಇರುತ್ತದೆ. ಅದಿಲ್ಲದೇ ಯಾವುದನ್ನೂ ಹೊಸದಾಗಿ ನೋಡಲು ಸಾಧ್ಯವಿಲ್ಲ. ಹೊಸದಾಗಿ ನೋಡುವ ಮುಗ್ಧತೆಯನ್ನು ನಾವು ಹಲವು ಬಾರಿ ಕಳೆದುಕೊಂಡಿರುತ್ತೇವೆ. ಒಂದು ಹಸು ನೋಡುವಾಗ ಈ ಹಿಂದೆ ನೋಡಿದ ಹಸುವಿನ ಬಿಂಬಗಳು ಪ್ರಭಾವ ಬೀರುತ್ತಿರುತ್ತವೆ. ಆ ಬಿಂಬಗಳ ಮುಂದುವರಿಕೆಯೇ ಈಗ ನೋಡುತ್ತಿರುವ ಹಸು. ಹಿಂದಿನ ನೆನಪುಗಳ ಹೊರೆಯ ನಡುವೆಯೇ ಈ ಹಸುವನ್ನೂ ಬೇರೆಯದಾಗಿ ಕಾಣಬೇಕಾಗುತ್ತದೆ. ಅದರಿಂದ ತಪ್ಪಿಸಿಕೊಂಡು ಹಸುವನ್ನು ಗಮನಿಸಲಾಗುವುದಿಲ್ಲ. ಸಾಹಿತ್ಯದ ಕಸುಬುದಾರಿಕೆ ಇರುವುದು ಅವೇಅವೇ ವಸ್ತುಗಳನ್ನು ಹೊಸದಾಗಿ ಕಾಣುವಲ್ಲಿ, ನಿರೂಪಿಸುವಲ್ಲಿ.

ಹಿಂದಿನ ದಿನಗಳಲ್ಲಿ ಇಂದೂ ಬದುಕುತ್ತಿರುವವರು ನಿತ್ಯವೂ ನಮ್ಮ ಕಣ್ಣಮುಂದೆ ಹಾಯುತ್ತಿರುತ್ತಾರೆ. 'ನಮ್ಮ ಕಾಲ ಹಾಗಿತ್ತು', 'ಆಗ ಏನು ಜೋರಾಗಿತ್ತು ಗೊತ್ತೆ?' ಎನ್ನುವವರು ತಮ್ಮ ನೆನಪುಗಳಲ್ಲೇ ಹೂತು ಹೋಗಿರುತ್ತಾರೆ. ಕೆನ್ನೆಯ ಹೊಳಪು ಕಳೆದುಕೊಂಡ ನಟಿಯ, ಅಧಿಕಾರ ಇಲ್ಲದ ರಾಜಕಾರಣಿಯ, ನಿವೃತ್ತ ಆಟಗಾರರ ಬಾಯಿಂದ ಇಂಥ ಮಾತುಗಳನ್ನು ಕೇಳುತ್ತ ಬಂದಿದ್ದೇವೆ. ಕಾಲ ಬದಲಾಗಿದೆ; ಅದರೊಂದಿಗೆ ಇವರು ಯಾರೂ ಬದಲಾಗಿರುವುದಿಲ್ಲ. ನೆನಪು ನಮಗೆ ಎಷ್ಟು ಸುಖದಾಯಕ ಎಂದರೆ, ನಾವು ಬಾಲ್ಯ ಕಳೆದ ಊರು, ಯಾವತ್ತೋ ಓದಿದ ಪುಸ್ತಕ, ಪತ್ರಿಕೆ, ನೋಡಿದ ಊರ ಜಾತ್ರೆ ಇವೆಲ್ಲವೂ ಪ್ರಿಯವಾಗುತ್ತಲೇ ಇರುತ್ತವೆ. ಹಾಗೆಂದೇ ಅವನ್ನು ಹುಡುಕಿಕೊಂಡು ಹೋಗುತ್ತಿರುತ್ತೇವೆ. ನಮಗಿಷ್ಟವಾಗುವ ನೆನಪಿಗೆ ಸಂಬಂಧಿಸಿದ ವಸ್ತುಗಳನ್ನು ಕಾಪಿಟ್ಟುಕೊಂಡಿರುತ್ತೇವೆ.

ನೆನಪು ಇಂದಿನದ್ದೇ. ಇಂದು ನೆನಪಿಸಿಕೊಂಡಾಗಲೇ ಅದಕ್ಕೊಂದು ಅರ್ಥ, ಬಣ್ಣ, ವಾಸನೆ ಬರುವುದು. ಅದು ವಯಸ್ಸಿಗೆ ಅನುಸಾರವಾಗಿ ಬೇರೆಬೇರೆಯಾಗಿರುತ್ತದೆ. ಮಗಳನ್ನು ಕಳೆದುಕೊಂಡ ತಂದೆ, ಅಲೆಮಾರಿಗಳ ನೆನಪು ಬೇರೆ. ಬಂಡುಕೋರನೊಬ್ಬನ ಹೆಂಡತಿ, ನಲ್ಲನ ವಿರಹದ ಬೇಗೆಯಲ್ಲಿರುವ ನಲ್ಲೆಯ ನೆನಪು ಬೇರೆ. ಈ ಎಲ್ಲ ನೆನಪಿನ ಸಂಪುಟಗಳು ಸೇರಿ ಸಾಹಿತ್ಯವಾಗುತ್ತದೆ. ಬದುಕಿನ ಪುಸ್ತಕಕ್ಕೆ ಈಗ ಇನ್ನೊಂದು ವರ್ಷದ ನೆನಪಿನ ಪುಟ ಸೇರಿದೆ. ಎಲ್ಲ ಅಸಹನೆಗಳನ್ನು ಬದಿಗಿರಿಸಿ ಜಗತ್ತನ್ನು ಶಿಶುಸಹಜ ಮುಗ್ಧತೆಯಲ್ಲಿ ನೋಡುವ ಗಳಿಗೆಗಳು ಎಲ್ಲರದಾಗಲಿ. ಓದುಗರಿಗೆ ಹೊಸ ವರ್ಷದ ಶುಭಾಶಯಗಳು.

**ಸಂದೀಪ ನಾಯಕ**